ನಡುಬಾಡೆ ಇ–ಪತ್ರಿಕೆ

ASDCA No;SCAB13122025/5632149 UDYAM-KR-18-0022072 ಕೊಡಗಿನ ಪ್ರಥಮ ದ್ವಿಭಾಷ ಸಂಜೆ ಇ-ದೈನಿಕ

ಸಂಪುಟ:01 ಸಂಚಿಕೆ: 50 ದಿನಾಂಕ: 27/11/26, ಶುಕ್ರವಾರ 8951073556 ನಾಳಂಕೆ ಬಿರ್ಯಾರ್ - 12, ಬೊಳ್ಯಾಚೆ

www.nadubadenews.com ಸಂಪಾದಕ: ಚಾಮೆರ ದಿನೇಶ್‌ಬೆಳ್ಯಪ್ಪ nadubadenews@gmail.com @nadubadenews

ಪುಟ: 1

ಬಪ್ಪಕಾಲತಿಂಜ ಪುತ್ತರಿಕ್ ನಂಗ ಏಳ್ ದಿನ ರಜೆ ಬುಡುವ : ಪ್ರಗತಿ ಸ್ಕೂಲ್ ವಿರಾಜಪೇಟೆ...

ನಡುಬಾಡೆ ಇ-ನ್ಯೂಸ್ ಬೋಡಿಕೆಕ್ ಒತ್ತಾಸೆರ ಫಲ

@nadubadenews, ನ. 27, ವಿರಾಜಪೇಟೆ: ಕೊಡವಾಮೆರ ಮೂಲಬೇರ್, ಪದ್ದತಿ ಪರಂಪರೆರ ಪವಿತ್ರ ಕಳ, ಮಂದ್‌ಮಾನಿರ ಅರಿವು ತಿರುಕಾಯಿತ್, ಬಪ್ಪಕಾಲತಿಂಜ ವಿರಾಜಪೇಟೆ ಪ್ರಗತಿ ಸ್ಕೂಲ್ ಪುತ್ತರಿಕ್ ಏಳ್ ನಾಳ್ ರಜೆ ಬುಡುವಕ್ ತೀರ್ಮಾನ ಎಡ್ತವಾಂದ್ ವಿರಾಜಪೇಟೆ ಪ್ರಗತಿಸ್ಕೂಲ್‌ರ ಅಡ್ಮಿನಿಸ್ಟ್ರೇಟರ್ ಮಾದಂಡ ತಿಮ್ಮಯ್ಯ ಅವು ಎಣ್ಣಿತ್.

ನಡುಬಾಡೆ ಇ-ಪೇಪರ್ ಸುದ್ದಿಕೊತ್ತನ್ನಕೆ ತಕ್ಪರ್‌ಂದ ಅವು, ಈಯಾಂಡೆತ ರಜೆರ ಪಟ್ಟಿ ಇಕ್ಕಾಕಲೇ ಆಯಿಪೋಯಿತುಳ್ಳಾನಕೊಂಡ್, ಬಪ್ಪ ಅಕಾಡೆಮಿಕ್ ಕಾಲತೊಟ್ಟ್ ಪುದಿಯ ರಜೆ ಪಟ್ಟಿ ಮಾಡೋಕ, ಪುತ್ತರಿಕೊತ್ತ ಆಯಿಮೆ ಕೊಯಿಮೆ ಕಯ್ಯೋಲ್ಲಿಕೆತ್ತನೆ ಏಳ್ ನಾಳ್ ಪುತ್ತರಿ ರಜೆ ಕೊಡ್ಪ ತೀರ್ಮಾನ ಎಡ್ತವಾಂದ್ ಎಣ್ಣಿತ್. ಇದ್, ಇನ್ನನೆಯೂ ಸೇವೆ ಮಾಡೋಲು ಎಣ್ಣೋಂಗೋರ್ ಸಾಕ್ಷಿಯಾಪದಲ್ಲತೆ, ಇನ್ನನೇ ಬೋರೆ ಕೊಡವ ಸಮಾಜ ಕೂಡ್ನನ್ನಕೆ ಕೊಡವ ನಡ್ತಿಯಂಡುಳ್ಳ ಎಲ್ಲಾ ಸ್ಕೂಲ್ ಕಾಲೇಜ್‌ಲೂ ಪುತ್ತರಿಕ್ ಏಳ್ ದಿನ ರಜೆ ಕೊಡ್ಪನ್ನೆಕೆ ಆಚೇಂಗಿ ಮಿಂಞಕ್ ಸರ್ಕಾರಮಟ್ಟತೂ ಈ ವಿಷ್ಯತ್ ವರಾತ ಮಾಡೋಕ್ ಸಾಯ ಆಕೂ.

ಅಂದೋಳ ಮೊಳಿಯಾನ ಪುತ್ತರಿ ಪೊವುದ್; ಮಿಂಞತ ಏಳ್ ನಾಳ್ ಮಂದ್ ಮನೆರ ಆಯಿಮೆ....

ಕೊಡವ ನಡ್ತುವ ಸ್ಕೂಲ್ ಕಾಲೇಜಿಕ್ ಏಳ್ ನಾಳ್ ರಜೆ ಬುಡುವನ್ನೆಕಾಡ್...



@nadubadenews; ವಿರಾಜಪೇಟೆ, ನ.26 ಪೊಮ್ಮಾಲೆ ಕೊಡವುಲ್ ಪುತ್ತರಿರ ಆಯಿಮೆ ಅಂದೋಳತ್ ಮೊಳಿಗೊಂಡಿತ್, ಕೊಡವಾಮೆರ ಬಾಳ್‌ನೆಲೆಯಾನ ನೆಲ್ಲ್‌ರ ಕದ್‌ನ ಕೊಂಡಾಡಿತ್ ಮನೆ ದುಂಬುಚಿಟ್ಟಂಡತ್.

ಇನ್ನನೆ ಮೊಳಿಯಾನ ಪುತ್ತರಿ ಇಂದ್‌ಂಜಿ ತೊಟ್ಟ್ ಮಿಂಞಕ್ ಏಳ್‌ನಾಳ್‌ಕೆತ್ತನೆ ಎಲ್ಲಾ ಊರ್ ನಾಡ್‌ಲೂ ಕೇರಿಮಂದ್, ನಾಡ್ ಮಂದ್, ಮನೆಪಾಟ್‌ಂಜಿ ತೊಟ್ಟ್ ಊರೋರ್ಮೆ, ನಾಡೊರ್ಮೆಕೆತ್ತನೆ ಅದದ್ ನಾಡ್ ಕೇರಿರ ಆಯಿಮೆ ಪೋಲೆ ಪದ್ದತಿರ ಆಟ್‌ಪಾಟ್ ನಡ್ಪದುಂಡ್.

ಈ ಎಲ್ಲಾ ಆಯಿಮೆ ಕೊಯಿಮೆಲೂ ನಂಗಡ ಮಕ್ಕಳೂ ಕೂಡಿಯಾಡಿತ್, ನಂಗಡ ಪರಂಪರೆರ ಭೀರ್ಯತ್‌ನ ಕಾಲ ಮುಂದಾರಕ್ ನಡ್ತಿ ಪೋಪನ್ನಕೆ ಆಂಡು. ಈ ನ್ಟ್‌ವೆಲ್ ಓದುವ

ಮಕ್ಕಳ್ ಏಳ್ ನಾಳ್ ರಜೆರ ಅವಷ್ಯಕತೆ ಏರ ಉಂಡ್. ಸರ್ಕಾರ ಒಮ್ಮಕೇ ಈ ತೀರ್ಮಾನಕ್ ಬಪ್ಪದ್ ಕಷ್ಟ.

ಕೊಡವ ಸಮಾಜ ಕೂಡ್‌ನನಕೆ, ಕೊಡವಂಗ ನಡ್ತಿಯಂಡುಳ್ಳ ಸ್ಕೂಲ್ ಕಾಲೇಜ್‌ಕ್, ಬೋರೆ ರಜೆನ ಕಮ್ಮಿ ಮಾಡಿತ್, ಪುತ್ತರಿಕ್ ಏಳ್ ನಾಳ್ ರಜೆ ಕೊಡ್ತಕ, ಮಿಂಞಕ್ ಜನಾಂಗಕೂ ಸಂಸ್ಥೆನ ನಡುವೈಂಗಕೂ ನಲ್ಲದಾಪದಲ್ಲತೆ, ಸರ್ಕಾರಕೂ ಪುತ್ತರಿರ ಬೀರ್ಯತ್‌ನ ಅರ್‌ಂಜಿತ್ ಮಿಂಞಕ್ ಸರ್ಕಾರಿ ರಜೆ ತಪ್ಪಕೂ ಏತುವಾಪ. ಇಕ್ಕಾಕಲೇ ಕೆಲವು ಸಂಸಕೃತಿಕಾರ ಅಯಿಂಗಡ ನಮ್ಮೆ ನಾಳ್‌ಕೊತ್ತನಕೆ ಅಯಿಂಗ ನಡ್ತುವ ಶಿಕ್ಷಣ ಸಂಸ್ಥೆಲ್ ರಜೆ ಕೊಡ್ತಂಡುಳ್ಳಾನ ನಂಗ ಇಲ್ಲಿ ಸಾಕ್ಷಿ ಆಯಿತ್ ಎಡ್ತವಲು. ಕಾಲಮಿಂಞಕ್ ಈ ವಿಚಾರತ್‌ನ ಕಿಕ್ಕಿನೋಟಿತ್ ತೀರ್ಮಾನಕ್ ಬಂದಕ ನಂದಾಕು...

ನಿನ್ನಾಂದ್ ಬೊಳಿ ಕಂಡ ನಡುಬಾಡೆ ಇ-ಪತ್ರಿಕೆ ಸಂಪಾದಕೀಯ...



ನಂಗಡ ಪದ್ದತಿ ಪರಂಪರೆನ ಕಾತ್ ಬೆಪ್ಪಕ್ ನಂಗಡ ಮಂದ್ ಮಾನಿಯೇ ಆಧಾರ. ನಂಗಡ ಮಕ್ಕಳ್ ಪದ್ದತಿರ ಕೂಟ್‌ಕ್ ಮನೆಪಾಟ್, ಮಂದ್ ಮಾನಿ, ಊರೊರ್ಮೆರ ಕಾರ್ಯಬೀರ್ಯ ಅರಿವಕ್ ಏತುವಾಪನ್ನಕೆ ಏಳ್ ನಾಳ್ ರಜೆರ ಅವಶ್ಯಕತೆ ಉಂಡ್. ಆದ್ಯ ಕೊಡವ ನಡ್ತೋ ಸ್ಕೂಲ್‌ಕಾರ ಕೊಡ್ತಕ ಬಾಕಿ ಉಳ್ಳವೂ ಕೊಡ್ಪನ್ನಕೆ ಆಪ.

ಅಲ್ಲಪ್ಪಿರ ಪೂವಪ್ಪ
ಕುಂಜೇರಿ / ಬೆಂಗಳೂರ್



ಮಕ್ಕಳ್ ಮಂದ್‌ರ ಬೀರ್ಯ ಬಲ್ಯದ್‌ಂದ್ ಕಾಟಿ ಕೊಡ್ಪ ಅವಸ್ಯಕತೆ ಏರ ಉಂಡ್, ಪಟ್ಟಣತಿಂಜೋ ನಂಗಡ ಮಕ್ಕ ಬಂದಿತ್ ಮಂದ್‌ಲ್ ಕೂಡೋಕ್ ರಜೆರ ಅವಶ್ಯ ಏರ ಉಂಡ್.

ಕಡೇಮಾಡ ಸುವಿತ್ ಸೋಮಣ್ಣ
ಕಾರ್ಯಾಕಾರ ಮೈಸೂರ್
ಕೊಡವ ಸಮಾಜ
ಯೂತ್‌ವಿಂಗ್



ಕೊಡವಾಮೆಕ್ ನಂಗ ಸೇವೆ ಮಾಡೋಕ್ ಕ್ಟ್ಟೋ ಎಲ್ಲಾ ಅವಕಾಶತ್‌ನೋ ನಂಗ ಬಳಸಿಯೋಂಡು. ನಂಗಡ ಮಕ್ಕಳ್ ನಂಗಡ ಪದ್ದತಿ ಪರಂಪರೆನ ಅರಿಯೋಕ್ ಪುತ್ತರಿರ ಆಯಿಮೆ ನೇರಾನ ಮೊಳಿಯಾಪ. ಇದಂಗ್ ನಂಗ ಒತ್ತಾಸೆ ಆಯಿತ್ ನಂಗ ಬಪ್ಪಕಾಲತಿಂಜ ಪುತ್ತರಿಕ್ ಏಳ್ ನಾಳ್ ರಜೆ ಕೊಡ್ಪಕ್ ಗ್ಯಾನಮಾಡಿತ್.

ಮಾದಂಡ ತಿಮ್ಮಯ್ಯ
ಅಡ್ಮಿನಿಸ್ಟ್ರೇಟರ್
ಪ್ರಗತಿ ಸ್ಕೂಲ್ ವಿರಾಜಪೇಟೆ



ಇಂದ್ ತಾಂದಂಡುಳ್ಳ ಕೊಡವಾಮೆರ ಪದ್ದತಿನ ಮಿಂಞಕ್ ನಡ್ತೋಕ್ ಪುತ್ತರಿರ ಏತುಲ್ ಓರ್ ಬಲ್ಯ ಬಟ್ಟೆ ಆಪ.

ನಂಗಡ ಪದ್ದತಿ ನಿಂದ್ಯದೇ ಮಂದ್‌ರ ನಳತ್, ಆನಕೊಂಡ್ , ನಂಗಳೇ ನಂಗಕ್ ಬೊಳಿ ಆಯಿತ್ ನಂಗಡೈಂಗ ನಡ್ತುವ ಸ್ಕೂಲ್ ಕಾಲೇಜಿಕ್ ರಜೆ ಕೊಡ್ತಕ ಮಿಂಞಕ್ ಬಾಕಿ ಎಲ್ಲರೂ ಕೊಡ್ಪನ್ನೆಕಾಪ.

ಅಪ್ಪಂಡೇರಂಡ ಯಶ್ವಂತ್ ಕಾಳಪ್ಪ
ಕೊರವುಕಾರ ಮರೋಡಿ ಯುವಕ ಸಂಘ, ಕುಟ್ಟಂದಿ



ಕೊಡವಾಮೆರ ನೇರ್ ನಲ್ಲಾಮೆಯೇ ಮಂದ್‌ರ ಅಡಿಲುಳ್ಳದ್, ನಂಗಡ ತನತ್‌ನ ಉಳ್ತೋಂಡುವೇಂಗಿ, ಮಂದ್ ಮಾನಿ ಉಳಿಯೋಂಡು. ಅದಂಗ್ ನಂಗಡ ಮಕ್ಕಳೂ ನಂಗಡ ಮಂದ್‌ರ ಭೀರ್ಯ ಅರಿವಕ್, ಏಳ್ ನಾಳ್ ರಜೆ ಕೊಡ್ಪನ್ನೆಕಾಡ್

ಕಾಟಿಮಾಡ ಜಿಮ್ಮಿ ಅಣ್ಣಯ್ಯ
ಅಜೀವ ಕೊರವುಕಾರ,
ಕ್‌ಗ್ಗಟ್ಟ್‌ನಾಡ್ ಪೆರಿಯ ನಾಗರೀಕಂಡ ವೇದಿಕೆ

ಟಿ. ಶೆಟ್ಟಿಗೇರಿ ಕೊಡವ ಸಮಾಜತ್ ತೂಕ್ ಬೊಳಕ್ ಕೊಡವ ವಾಲಗತ್ತಾಟ್ ನಮ್ಮೆ

@nadubadenews; ನ.27; ಮಡಿಕೇರಿ: ಕೊಡವ ಪದ್ದತಿಕೊತ್ತ ವಾಲಗತ್ತಾಟ್ ನ ಉಳ್‌ತಿ ಬೊಳತುವ ನ್‌ಟ್ಟ್‌ಲ್ ಕಯಿಂಜ ನಾಲ್ ಕಾಲ ತೊಟ್ಟ್ ತೂಕ್ ಬೊಳಕ್ ಕಲೆ ಕ್ರೀಡೆ ಸಾಹಿತ್ಯ ಅಕಾಡೆಮಿ, ವಿರಾಜಪೇಟೆ ಇಯಂಗ ನಡ್‌ತಿಯಂಡುಳ್ಳ "ತೂಕ್ ಬೊಳಕ್ ಕೊಡವ ವಾಲಗತ್ತಾಟ್ ನಮ್ಮೆ-2026" ಕಾರ್ಬಾರ್ ಇದೇ ಡಿಸೆಂಬರ್-13ಂಗ್ ಪೊಲಾಕ 10-00 ಗಂಟೆಂಜ ಟಿ. ಶೆಟ್ಟಿಗೇರಿ ಕೊಡವ ಸಮಾಜತ್ ನಡ್‌ಪಾಂದ್ ತೋಕ್‌ಬೊಳಕ್ ಕಲೆ ಸಾಹಿತ್ಯ ಅಕಾಡೆಮಿ ಕಮೊರವುಕಾರ ಮಲ್ಲೆಂಗಡ ಮಧೋಷ್ ಪೂವಯ್ಯ ಅವು ಎಣ್ಣಿತ್.

ತಾವಳಗೇರಿ ಮೂಂದ್ ನಾಡ್ ಕೊಡವ ಸಮಾಜ ಟಿ. ಶೆಟ್ಟಿಗೇರಿ ಇಯಂಗಡ ಸಾಕಾರತ್ ಪೆರ್ತ್ ಗೌಜಿಲ್ ನಡ್‌ಪ ಈ ವಾಲಗತ್ತಾಟ್ ನಮ್ಮೆಲ್ ಆಣಾಳ್, ಪೊಣ್ಣಾಳ್ ,ಮಕ್ಕ- ಇನ್ನನೆ 16 ವಿಭಾಗತ್ ಪೈಪೋಟಿ ನಡ್‌ಪ. ಪದ್ದತಿಕೊತ್ತ ಕೊಡವ ವಾಲಗತಾಟ್ ನಮ್ಮೆಯಾಯಿತ್ ಅಂದೋಡೆ



ನಡತಿಯಂಡುಳ್ಳ "ತೂಕ್ ಬೊಳಕ್ ಕೊಡವ ವಾಲಗತಾಟ್ ನಮ್ಮೆ- 2026" ಕ್ ಮಾನಾಡ್ ಮಾಜನಡ ಸಾಕಾರ ಬೋಂಡೂಂದ್ ಅವು ಕೇಟಂಡಿತ್.

ಪೈಪೋಟಿ ಅರಿವು:

ಚೆರಿಯ ಮಕ್ಕಪಿಂಞ ಎಲ್.ಕೆ.ಜಿ. ಪಿಂಞ ಯು.ಕೆ.ಜಿ., 1ನೇ ಕ್ಲಾಸ್‌ಂಜ 4ನೇ ಕ್ಲಾಸ್, 5ನೇ ಕ್ಲಾಸ್ ಂಜ7ನೇ ಕ್ಲಾಸ್, 8ನೇ ಕ್ಲಾಸ್ ಂಜ10ನೇ ಕ್ಲಾಸ್, 1ನೇ ಪಿಯುಸಿ ಪಿಂಞ 2ನೇ ಪಿಯುಸಿ, ಪದವಿ, ಸಾರ್ವಜನಿಕ(60 ಬಯತ್‌ರೊಳಿಯ) ಪೆರಿಯ ನಾಗರಿಕಂಗ(60 ಬಯತ್‌ರ ಮೀದ)

ಇನ್ನನೆ ಆಣಾಳ್ ಪೊಣ್ಣಾಳ್‌ಂದ್ ಬೋರೆ ಬೋರೆಯಾಯಿತ್ 16 ವಿಭಾಗತ್ ಈ ಪೈಪೊಟಿ ನಡ್‌ಪ.

ಏರ ವಿವರಕ್ 9480556667 ಂಗ್ ತಕ್ಕ್ ಪರೆಯಲು.

ಭಾರತ್ ಸಂಚಾರ ನಿಗಮ ಸಮಿತಿಗೆ ಮುನೀರ್ ಅಹಮದ್



ಭಾರತ್ ಸಂಚಾರ್ ನಿಗಮದ ರಾಷ್ಟ್ರೀಯ ಸಲಹಾ ಸಮಿತಿ ಸದಸ್ಯರಾಗಿ, ಮಡಿಕೇರಿಯ ಎಸ್.ಐ. ಮುನೀರ್ ಆಹಮ್ಮದ್ ನೇಮಕವಾಗಿದ್ದಾರೆ. ರಾಜ್ಯ ಸಭಾ ಸದಸ್ಯ ಪವನ್ ಖೇರ ಸಲಹೆ ಮೇರೆಗೆ ಕೇಂದ್ರ ಸಂಪರ್ಕ ಇಲಾಖೆ ಸಚಿವ ಜ್ಯೋತಿರಾಧಿತ್ಯ ಸಿಂದ್ಯಾ ಅವರಿಂದ ಮುನೀರ್ ನೇಮಕ



ಕನಕದಾಸರ ಚಿಂತನೆ, ಕೀರ್ತನೆಗಳು ಮಾನವಕುಲಕ್ಕೆ ಸದಾ ದಾರಿದೀಪ: ಜಯಲಕ್ಷ್ಮಿ ರಾಯಕೋಡ್

@nadubadenews; ನ.27; ಮಡಿಕೇರಿ: ಕನಕದಾಸರು ತಮ್ಮ ಕೀರ್ತನೆಗಳ ಮೂಲಕ ಸಮಾಜದ ಅಂಕುಡೊಂಕುಗಳನ್ನು ತಿದ್ದುವ ಕಾರ್ಯ ಮಾಡಿದ್ದಾರೆ ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಜಯಲಕ್ಷ್ಮಿ ರಾಯಕೋಡ್ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ನಗರದ ಗಾಂಧಿಭವನದಲ್ಲಿ ಶುಕ್ರವಾರ ನಡೆದ ಕನಕದಾಸರ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ದಾರ್ಶನಿಕ ಸಂತ, ಶ್ರೇಷ್ಠ ಕವಿ ಹಾಗೂ ಸಮಾಜ ಸುಧಾರಕ ಕನಕದಾಸರ ಜೀವನ, ಚಿಂತನೆ ಹಾಗೂ ಕೀರ್ತನೆಗಳು ಕೇವಲ ಒಂದು ಕಾಲಘಟ್ಟಕ್ಕೆ ಅಥವಾ ನಿರ್ದಿಷ್ಟ ವರ್ಗಕ್ಕೆ ಸೀಮಿತವಾಗಿಲ್ಲ. ಅವು ಇಂದಿಗೂ, ಎಂದೆಂದಿಗೂ ಇಡೀ ಮಾನವಕುಲಕ್ಕೆ ದಾರಿದೀಪವಾಗಿವೆ ಎಂದರು.

ಮಹಾನ್ ವ್ಯಕ್ತಿಗಳ ಜಯಂತಿಯನ್ನು ಆಚರಿಸುವ ಉದ್ದೇಶ ಅವರ ಆದರ್ಶ, ಚಿಂತನೆ ಹಾಗೂ ಸಮಾಜಕ್ಕೆ ನೀಡಿದ ಕೊಡುಗೆಗಳನ್ನು ಸ್ಮರಿಸಿ, ಅವುಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವುದಾಗಿದೆ. ಕನಕದಾಸರು ತಮ್ಮ ಚಿಂತನೆಗಳ ಮೂಲಕ ಸಾಮಾಜಿಕ ನ್ಯಾಯ, ಸಮಾನತೆ ಹಾಗೂ ಮಾನವೀಯ ಮೌಲ್ಯಗಳ ಮಹತ್ವವನ್ನು ಸಾರಿದ್ದಾರೆ ಎಂದು ತಿಳಿಸಿದರು.

ಕನಕದಾಸರ ಕೀರ್ತನೆಗಳಲ್ಲಿ ಸತ್ಯ, ಸರಳತೆ ಹಾಗೂ ಮಾನವೀಯತೆಯ ಸಂದೇಶ ಅಡಕವಾಗಿದೆ. ಸತ್ಯವಂತರ ಸಂಗದಲ್ಲಿದ್ದಾಗ ಯಾವುದೇ ರೀತಿಯ ತೀರ್ಥಸ್ನಾನದ ಅಗತ್ಯವಿಲ್ಲ ಎಂಬ ಕನಕದಾಸರ ಸಂದೇಶವು ಮನುಷ್ಯನ ಆಂತರಿಕ ಶುದ್ಧತೆ ಹಾಗೂ ಸತ್ಯನಿಷ್ಠೆಯ ಮಹತ್ವವನ್ನು ಸಾರುತ್ತದೆ. ಸರಳ ಜೀವನ ನಡೆಸುತ್ತಾ ಸಮಾಜಕ್ಕೆ ಉತ್ತಮ ಮಾರ್ಗದರ್ಶನ



ನೀಡಿದ ಅವರ ಆದರ್ಶಗಳು ಪ್ರತಿಯೊಬ್ಬರಿಗೂ ಅನುಕರಣೀಯವಾಗಿವೆ ಎಂದು ಜಯಲಕ್ಷ್ಮಿ ರಾಯಕೋಡ್ ಹೇಳಿದರು.

ಸೋಮವಾರಪೇಟೆ ತಾಲ್ಲೂಕಿನ ಬೆಸೂರು ಪ್ರೌಢಶಾಲೆಯ ಶಿಕ್ಷಕ ಕೆ.ಎನ್.ಕಿರಣ್ ಕುಮಾರ್ ಮಾತನಾಡಿ, ಕನಕದಾಸರು ಬಾಲ್ಯದಿಂದಲೇ ಸಮಾಜಕ್ಕೆ ಏನಾದರೂ ಕೊಡುಗೆ ನೀಡಬೇಕೆಂಬ ಚಿಂತನೆ ಹೊಂದಿದ್ದರು. ಯಾವುದೇ ಬಾಹ್ಯ ಬಲವಿಲ್ಲದಿದ್ದರೂ ತಮ್ಮ ಜ್ಞಾನಶಕ್ತಿ, ಭಕ್ತಿ ಹಾಗೂ ಕೀರ್ತನೆಗಳ ಮೂಲಕ ಜನಮಾನಸದಲ್ಲಿ ಶಾಶ್ವತ ಸ್ಥಾನ ಪಡೆದ ಮಹಾನ್ ವ್ಯಕ್ತಿಯಾಗಿದ್ದಾರೆ ಎಂದು ಹೇಳಿದರು.

ಕನಕದಾಸರ ಜೀವನವನ್ನು ಅವಲೋಕಿಸಿದಾಗ ಅವರಲ್ಲಿ ಏನಾದರೂ ಕೊಡುಗೆ ನೀಡಬೇಕೆಂಬ ತುಡಿತ ಬಾಲ್ಯದಿಂದಲೇ ಇತ್ತು ಎಂಬುದು ತಿಳಿದುಬರುತ್ತದೆ. ಆದರೆ ಅವರಿಗೆ ಅಕ್ಷರಜ್ಞಾನ, ಜನಬಲ, ಹಣಬಲ ಸೇರಿದಂತೆ ಯಾವುದೇ ಬಾಹ್ಯ ಶಕ್ತಿಗಳ ಬೆಂಬಲವಿರಲಿಲ್ಲ. ಇಂತಹ ಸೀಮಿತ ಪರಿಸ್ಥಿತಿಗಳ ನಡುವೆಯೂ ತಮ್ಮ ಅಪಾರ ಜ್ಞಾನಶಕ್ತಿಯಿಂದ ವಿಶಿಷ್ಟ ಚರಿತ್ರೆಯನ್ನು ನಿರ್ಮಿಸಿಕೊಂಡರು ಎಂದರು. ಯಾವುದೇ ಬಾಹ್ಯ ಬಲವಿಲ್ಲದ ವ್ಯಕ್ತಿಯೊಬ್ಬರು ತಮ್ಮ ಜ್ಞಾನಶಕ್ತಿಯಿಂದ ಇಡೀ ಭಾರತ ಮಾತ್ರವಲ್ಲದೆ ವಿಶ್ವದಾದ್ಯಂತ ಗುರುತಿಸಿಕೊಳ್ಳುವ ಮಟ್ಟಕ್ಕೆ ಬೆಳೆದಿರುವುದು ಕನಕದಾಸರ ವ್ಯಕ್ತಿತ್ವದ ಮಹತ್ವವನ್ನು ಸಾರುತ್ತದೆ. ಅವರ ಜ್ಞಾನಶಕ್ತಿಯ ಆಳ, ಚಿಂತನೆ ಹಾಗೂ ಸಾಧನೆಯನ್ನು ನಾವು ಸಮಗ್ರವಾಗಿ ಅವಲೋಕಿಸಬೇಕಾಗಿದೆ ಎಂದು ತಿಳಿಸಿದರು. ನಾರಾಯಣನ ಭಕ್ತರಾಗಿ ಕೀರ್ತನೆಗಳನ್ನು ರಚಿಸಿ, ಹಾಡುವ ಮೂಲಕ ಭಕ್ತಿ, ಸಮಾನತೆ ಹಾಗೂ ಮಾನವೀಯ ಮೌಲ್ಯಗಳ ಸಂದೇಶವನ್ನು ಜನರಿಗೆ ತಲುಪಿಸಿದ ಕನಕದಾಸರು ಇಂದಿಗೂ ಜನಮಾನಸದಲ್ಲಿ ಅಜರಾಮರವಾಗಿ ನೆಲೆಸಿದ್ದಾರೆ ಎಂದು ಹೇಳಿದರು.

ಕೊಡಗು ಜಿಲ್ಲಾ ಕುರುಬ ಸಂಘದ ಪ್ರಧಾನ ಕಾರ್ಯದರ್ಶಿ ಬಿ.ಎ.ಗಂಗಾಧರ ಮಾತನಾಡಿ, ಮಾನವೀಯ ಮೌಲ್ಯಗಳು ವ್ಯಕ್ತಿಯ ಮನಸ್ಸಿನಲ್ಲಿ ಆಳವಾಗಿ ಬೇರೂರಿದಾಗ ಬದುಕು ಕೇವಲ ಅಸ್ತಿತ್ವದ ಹೋರಾಟವಾಗಿ ಉಳಿಯುವುದಿಲ್ಲ. ಅದು ಅರ್ಥಪೂರ್ಣ, ನೆಮ್ಮದಿಯ ಹಾಗೂ ಸಮಾಜಮುಖಿ ಪಯಣವಾಗುತ್ತದೆ ಎಂದರು.

ಕುಶಾಲನಗರದ ಹಿರಿಯ ರಂಗಭೂಮಿ ಕಲಾವಿದ ಬರಮಣ್ಣ ಟಿ. ಬೆಟಗೇರಿ ಮಾತನಾಡಿ, ಕನಕದಾಸರು ತಮ್ಮ ಗೀತೆಗಳ ಮೂಲಕ ವೈಚಾರಿಕ ವಿಚಾರಗಳನ್ನು ವಿವರಿಸಿದ್ದಾರೆ. ಕೀರ್ತನೆಗಳ ಮೂಲಕ ನಿಜವಾದ ಜೀವನವನ್ನು ಹೇಗೆ ನಡೆಸಬೇಕು ಎಂಬುದನ್ನು ತಿಳಿಸಿಕೊಟ್ಟಿದ್ದಾರೆ ಎಂದು ಕನಕದಾಸರ ಕೀರ್ತನೆಗಳನ್ನು ಉಲ್ಲೇಖಿಸಿ ವಿವರಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಎಸ್.ಜೆ.ಸೋಮಶೇಖರ್, ಜಿ.ಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ದಿನೇಶ್ ಕುಮಾರ್ ಮೀನಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಎನ್.ಬಿಂದುಮಣಿ, ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಜಿಲ್ಲಾ ಸಂಚಾಲಕ ಹೆಚ್.ಎಲ್.ದಿವಾಕರ್ ಹಾಗೂ ವಿದ್ಯಾರ್ಥಿ ನಿಲಯದ ವಿದ್ಯಾರ್ಥಿಗಳು ಇದ್ದರು. ಉಪನ್ಯಾಸಕಿ ಜಯಲಕ್ಷ್ಮಿ ಹಾಗೂ ಸಮರ್ಥ ಕನ್ನಡಿಗರು ಸಂಘಟನೆಯ ಸಂಚಾಲಕಿ ಸೌಮ್ಯ ಅವರು ನಾಡಗೀತೆ ಮತ್ತು ವಂದೇ ಮಾತರಂ ಹಾಡಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಕುಮಾರ್ ಸ್ವಾಗತಿಸಿದರು. ಮಣಜೂರು ಮಂಜುನಾಥ್ ನಿರೂಪಿಸಿ, ವಂದಿಸಿದರು.

ಐಮಂಡ ರೂಪೇಶ್ ನಾಣಯ್ಯ ಅವರ ಎರಡು ಕಲಾಕೃತಿಗಳು ಅಮೃತಸರದ ಅಖಿಲ ಭಾರತ ಕಲಾಪ್ರದರ್ಶನ





@nadubadenews; ನ.27; ಮಡಿಕೇರಿ; ಕೊಡಗಿನ ಮರಗೋಡು ಗ್ರಾಮದ ಕಲಾವಿದ ಐಮಂಡ ರೂಪೇಶ್ ನಾಣಯ್ಯ ಅವರ ಎರಡು ಕಲಾಕೃತಿಗಳು ಪಂಜಾಬಿನ ಅಮೃತಸರದಲ್ಲಿ ನಡೆಯುತ್ತಿರುವ ಪ್ರತಿಷ್ಠಿತ 91ನೇ ಅಖಿಲ ಭಾರತ ಕಲಾ ಪ್ರದರ್ಶನಕ್ಕೆ ಆಯ್ಕೆಯಾಗಿವೆ. 'ಪರಿಶ್ರಮದ ಹಾದಿ' (Laborious Path) ಮತ್ತು 'ಅಲ್ಪಕಾಲಿಕ ಕನಸುಗಳು' (Epheme

ನಡುಬಾಡೆ ಇ-ಪತ್ರಿಕೆ
ASDCA No; SCAB13122025/5632149 JDYAM-KR-18-0022072 ಕೊಡಗಿನ ಪ್ರಥಮ ದ್ವಿಭಾಷ ಸಂಜೆ ಇ-ದೈನಿಕ
ದಿನಾಂಕ: 27/11/26, ಶುಕ್ರವಾರ 8951073556 ನಾಳಂಕೆ : ಬಿರ್ಯಾರ್ - 12, ಬೊಳ್ಯಾಚೆ
www.nadubadenews.com ಸಂಪಾದಕ: ಚಾಮರ ದಿನೇಶ್‌ಬೆಳ್ಯಪ್ಪ nadubadenews@gmail.com @nadubadenews

ನಾಳೆಯ (17 ನವೆಂಬರ್, 2026) ದ್ವಾದಶ ರಾಶಿಗಳ ಭವಿಷ್ಯ

ಮೇಷ
ವ್ಯಾಪಾರದಲ್ಲಿ ಹೊಸ ಪಾಲುದಾರಿಕೆಗಳು ರೂಪುಗೊಳ್ಳುವ ಸಾಧ್ಯತೆಯಿದೆ. ನಿಮ್ಮ ದೂರದೃಷ್ಟಿಯ ನಿರ್ಧಾರಗಳು ಭವಿಷ್ಯದಲ್ಲಿ ಉತ್ತಮ ಫಲ ನೀಡಲಿವೆ. ಕುಟುಂಬದ ಹಿರಿಯರ ಆರೋಗ್ಯ ಸುಧಾರಿಸಲಿದೆ.

ವೃಷಭ
ಆರ್ಥಿಕ ವ್ಯವಹಾರಗಳಲ್ಲಿ ಎಚ್ಚರಿಕೆ ಅಗತ್ಯವಿದೆ. ಕೆಲಸದ ಸ್ಥಳದಲ್ಲಿ ಹೊಸ ಜವಾಬ್ದಾರಿಗಳು ದೊರೆಯಲಿವೆ. ಸಂಗಾತಿಯೊಂದಿಗೆ ಸಣ್ಣಪುಟ್ಟ ಭಿನ್ನಾಭಿಪ್ರಾಯಗಳು ಬಗೆಹರಿಯಲಿವೆ.

ಮಿಥುನ
ಪ್ರಯಾಣದ ಯೋಗವಿದೆ, ಹೊಸ ಜನರ ಪರಿಚಯವಾಗಲಿದೆ. ಮಾಧ್ಯಮ ಮತ್ತು ಸಂವಹನ ಕ್ಷೇತ್ರದಲ್ಲಿರುವವರಿಗೆ ಉತ್ತಮ ಅವಕಾಶಗಳು ಸಿಗಲಿವೆ. ಆರ್ಥಿಕ ಸ್ಥಿತಿ ಸಾಧಾರಣವಾಗಿರಲಿದೆ.

ಕರ್ಕಾಟಕ
ಭಾವನಾತ್ಮಕ ನಿರ್ಧಾರಗಳನ್ನು ತೆಗೆದುಕೊಳ್ಳುವಾಗ ಸಮಾಧಾನವಿರಲಿ. ಮನೆಯ ಸದಸ್ಯರೊಂದಿಗೆ ಸಮಯ ಕಳೆಯುವುದರಿಂದ ಮನಸ್ಸಿಗೆ ನೆಮ್ಮದಿ ದೊರೆಯಲಿದೆ. ಹಳೆಯ ಸಾಲ ತೀರುವ ಸಾಧ್ಯತೆಯಿದೆ.

ಸಿಂಹ
ನಾಯಕತ್ವದ ಗುಣಗಳು ನಿಮ್ಮನ್ನು ಮುನ್ನಡೆಸಲಿವೆ. ಸಾಮಾಜಿಕ ಕಾರ್ಯಗಳಲ್ಲಿ ಗೌರವ ಮತ್ತು ಮನ್ನಣೆ ಲಭಿಸಲಿದೆ. ಆರೋಗ್ಯದ ಕಡೆ ಸ್ವಲ್ಪ ಗಮನ ಹರಿಸುವುದು ಒಳಿತು.

ಕನ್ಯಾ
ಯೋಜಿತ ಕೆಲಸಗಳು ನಿರೀಕ್ಷೆಯಂತೆ ಪೂರ್ಣಗೊಳ್ಳಲಿವೆ. ಲೆಕ್ಕಪತ್ರ ಮತ್ತು ಆಡಳಿತಾತ್ಮಕ ವಿಷಯಗಳಲ್ಲಿ ಯಶಸ್ಸು ಸಿಗಲಿದೆ. ಆಹಾರ ಪದ್ಧತಿಯಲ್ಲಿ ಶಿಸ್ತು ಕಾಪಾಡಿಕೊಳ್ಳಿ.

ತುಲಾ
ಕಲೆ, ಸೃಜನಶೀಲತೆ ಮತ್ತು ಸಾರ್ವಜನಿಕ ಸಂಪರ್ಕದ ಕೆಲಸಗಳಲ್ಲಿ ಪ್ರಗತಿ ಕಂಡುಬರಲಿದೆ. ಹೊಸ ಹೂಡಿಕೆಗಳ ಬಗ್ಗೆ ತಜ್ಞರ ಸಲಹೆ ಪಡೆಯಿರಿ. ಸ್ನೇಹಿತರಿಂದ ಸಹಾಯ ದೊರೆಯಲಿದೆ.

ವೃಶ್ಚಿಕ
ಗುಪ್ತ ವಿಚಾರಗಳು ಅಥವಾ ಹಳೆಯ ಸಮಸ್ಯೆಗಳಿಗೆ ಪರಿಹಾರ ಸಿಗಲಿದೆ. ವೃತ್ತಿ ಜೀವನದಲ್ಲಿ ಧೈರ್ಯದಿಂದ ತೆಗೆದುಕೊಂಡ ನಿರ್ಧಾರಗಳು ಲಾಭ ತರಲಿವೆ. ದೂರದ ಪ್ರಯಾಣವನ್ನು ಮುಂದೂಡುವುದು ಉತ್ತಮ.

ಧನು
ಧಾರ್ಮಿಕ ಮತ್ತು ಶೈಕ್ಷಣಿಕ ವಿಚಾರಗಳಲ್ಲಿ ಆಸಕ್ತಿ ಹೆಚ್ಚಲಿದೆ. ದೂರದೂರಿನಿಂದ ಶುಭ ಸುದ್ದಿ ಬರುವ ನಿರೀಕ್ಷೆಯಿದೆ. ಹಿರಿಯರ ಆಶೀರ್ವಾದದಿಂದ ಕಾರ್ಯಗಳು ಸುಗಮವಾಗಲಿವೆ.

ಮಕರ
ಕಠಿಣ ಪರಿಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯಲಿದೆ. ಆಸ್ತಿ ಅಥವಾ ವಾಹನ ಸಂಬಂಧಿತ ವ್ಯವಹಾರಗಳಲ್ಲಿ ಮುನ್ನಡೆ ಇರಲಿದೆ. ಕೆಲಸದ ಒತ್ತಡದಿಂದ ಸ್ವಲ್ಪ ಆಯಾಸವಾಗಬಹುದು.

ಕುಂಭ
ಹೊಸ ಆಲೋಚನೆಗಳು ಮತ್ತು ತಂತ್ರಜ್ಞಾನದ ಬಳಕೆಯಿಂದ ಕೆಲಸದಲ್ಲಿ ವೇಗ ಸಿಗಲಿದೆ. ತಂಡದೊಂದಿಗೆ ಕೆಲಸ ಮಾಡುವುದರಿಂದ ಉತ್ತಮ ಫಲಿತಾಂಶ ಬರಲಿದೆ. ಖರ್ಚುಗಳನ್ನು ನಿಯಂತ್ರಣದಲ್ಲಿಡಿ.

ಮೀನ
ಆಂತರಿಕ ಶಾಂತಿ ಮತ್ತು ಸೃಜನಶೀಲ ಚಿಂತನೆಗಳು ಹೆಚ್ಚಲಿವೆ. ಕಲಾ ಕ್ಷೇತ್ರ ಮತ್ತು ಸೇವಾ ವಲಯದಲ್ಲಿರುವವರಿಗೆ ಅನುಕೂಲಕರ ದಿನ. ಕುಟುಂಬದಲ್ಲಿ ಶುಭ ಕಾರ್ಯದ ಚರ್ಚೆ ನಡೆಯಬಹುದು.

(ಗಮನಿಸಿ: ರಾಶಿ ಭವಿಷ್ಯವು ಸಾಮಾನ್ಯ ಗ್ರಹಚಾರವನ್ನು ಆಧರಿಸಿದ್ದು, ವೈಯಕ್ತಿಕ ಜಾತಕಕ್ಕೆ ಅನುಗುಣವಾಗಿ ಸ್ವಲ್ಪ ಬದಲಾವಣೆಗಳಿರಬಹುದು.)



ಹಾನಗಲ್ಲು ಶೆಟ್ಟಳ್ಳಿ ಸರ್ಕಾರಿ ಶಾಲೆಯಲ್ಲಿ ಮಕ್ಕಳ ಹಕ್ಕುಗಳ ಜಾಗೃತಿ...



@nadubadenews ಸೋಮವಾರಪೇಟೆ ನ.27:: ಮಕ್ಕಳ ಹಕ್ಕುಗಳು, ಮಕ್ಕಳ ಗ್ರಾಮಸಭೆ ಹಾಗೂ ಸ್ಥಳೀಯ ಆಡಳಿತ ವ್ಯವಸ್ಥೆಯ ಕುರಿತು ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವ ವಿಶೇಷ ಜಾಗೃತಿ ಕಾರ್ಯಕ್ರಮವು ಸೋಮವಾರಪೇಟೆ ಸಮೀಪದ ಹಾನಗಲ್ಲು ಶೆಟ್ಟಳ್ಳಿಯ ಸರ್ಕಾರಿ ಶಾಲೆಯಲ್ಲಿ ನಡೆಯಿತು.

ನಾವು ಪ್ರತಿಷ್ಠಾನ ಟ್ರಸ್ಟ್ ಹಾಗೂ ಸಿಎಂಸಿಎ ಸಂಸ್ಥೆಯ ಸಹಯೋಗದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಕ್ಕಳ ಗ್ರಾಮಸಭೆಯ ಪರಿಕಲ್ಪನೆ, ಉದ್ದೇಶ ಮತ್ತು ಮಹತ್ವದ ಕುರಿತು ಪ್ರತಿಷ್ಠಾನದ ಕಾರ್ಯಕಾರಿ ಮಂಡಳಿ ನಿರ್ದೇಶಕಿ ಸುಮನಾ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು.

ಮಕ್ಕಳ ಬದುಕುವ ಹಕ್ಕು, ರಕ್ಷಣೆಯ ಹಕ್ಕು, ಅಭಿವೃದ್ಧಿಯ ಹಕ್ಕು ಹಾಗೂ ಭಾಗವಹಿಸುವಿಕೆಯ ಹಕ್ಕುಗಳ ಕುರಿತು ವಿವಿಧ ಚಟುವಟಿಕೆಗಳ ಮೂಲಕ ಅರಿವು ಮೂಡಿಸಲಾಯಿತು. ಗ್ರಾಮ ಪಂಚಾಯಿತಿಯ ರಚನೆ, ಕಾರ್ಯವೈಖರಿ, ಜವಾಬ್ದಾರಿಗಳು ಹಾಗೂ ಗ್ರಾಮಮಟ್ಟದಲ್ಲಿ ಮಕ್ಕಳ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಸ್ಥಳೀಯ ಆಡಳಿತದ ಪಾತ್ರದ ಬಗ್ಗೆಯೂ ತಿಳಿಸಿಕೊಡಲಾಯಿತು. ಮಕ್ಕಳು ಗ್ರಾಮದ ಅಭಿವೃದ್ಧಿ ಕಾರ್ಯಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು. ತಮ್ಮ ಗ್ರಾಮದ ಸಮಸ್ಯೆಗಳು, ಅಗತ್ಯಗಳು ಹಾಗೂ ಬೇಡಿಕೆಗಳನ್ನು ಮುಕ್ತವಾಗಿ ವ್ಯಕ್ತಪಡಿಸುವ ಮೂಲಕ ಗ್ರಾಮಸಭೆಯಲ್ಲಿ ಅಭಿಪ್ರಾಯಗಳನ್ನು ಮಂಡಿಸಬೇಕು ಎಂದು ತಿಳಿಸಲಾಯಿತು. ಮಕ್ಕಳ ಹಕ್ಕುಗಳ ರಕ್ಷಣೆ, ಅವರ ಅಭಿಪ್ರಾಯಗಳಿಗೆ ಮನ್ನಣೆ ನೀಡುವುದು ಹಾಗೂ ಮಕ್ಕಳ ಸ್ನೇಹಿ ಗ್ರಾಮ ಆಡಳಿತ ವ್ಯವಸ್ಥೆಯನ್ನು ರೂಪಿಸುವಲ್ಲಿ ಮಕ್ಕಳ ಗ್ರಾಮಸಭೆಯು ಮಹತ್ವದ ವೇದಿಕೆಯಾಗಿದೆ ಎಂದು ಸುಮನಾ ಹೇಳಿದರು.

ಕಾರ್ಯಕ್ರಮದಲ್ಲಿ ಶಾಲೆಯ ಮುಖ್ಯಶಿಕ್ಷಕ ಸುಕುಮಾರ್, ನಾವು ಪ್ರತಿಷ್ಠಾನ ಸಂಸ್ಥೆಯ ಸ್ಥಾಪಕ ಗೌತಮ್ ಹಾಗೂ ಸಂಸ್ಥೆಯ ಸ್ವಯಂಸೇವಕರು ಉಪಸ್ಥಿತರಿದ್ದರು.

ಡಿ.17 ರಿಂದ ಕುರಿ ಸಾಕಾಣಿಕೆ ಉಚಿತ ತರಬೇತಿಗೆ ಅರ್ಜಿ ಆಹ್ವಾನ...

@nadubadenews ಮಡಿಕೇರಿ ನ.27:-ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಶಿಕ್ಷಣ ಟ್ರಸ್ಟ್ ಮತ್ತು ಕೆನರಾ ಬ್ಯಾಂಕ್ ಸಹಯೋಗದಲ್ಲಿ ನಡೆಸುತ್ತಿರುವ ರುಡ್‌ಸೆಟ್ ಸಂಸ್ಥೆಯ ವತಿಯಿಂದ ಹಮ್ಮಿಕೊಂಡಿರುವ ಉಚಿತವಾಗಿ ನಡೆಸುವ 12 ದಿನಗಳ ಕುರಿ ಸಾಕಾಣಿಕೆ ಉಚಿತ ತರಬೇತಿ ಕಾರ್ಯಕ್ರಮವು ಡಿಸೆಂಬರ್ 17 ರಿಂದ ಆಯೋಜಿಸಲಾಗಿದ್ದು, ಗ್ರಾಮೀಣ ಆಸಕ್ತ ನಿರುದ್ಯೋಗಿ ಯುವಕ-ಯುವತಿಯರು ಅರ್ಜಿ ಸಲ್ಲಿಸಬಹುದಾಗಿದೆ.

ಆಸಕ್ತ 19 ರಿಂದ 49 ವರ್ಷ ವಯೋಮಾನದವರಾಗಿದ್ದು, ಕನ್ನಡ ಭಾμÉ ಓದಲು ಮತ್ತು ಬರೆಯಲು ಬಲ್ಲವರಾಗಿರಬೇಕು. ಗ್ರಾಮೀಣ ಪ್ರದೇಶದ ಆಧಾರ್ ಕಾರ್ಡ್ ಹಾಗೂ ಬಿಪಿಎಲ್ ಕಾರ್ಡ್ ಹೊಂದಿರುವವರಿಗೆ ಆದ್ಯತೆ ನೀಡಲಾಗುವುದು. ತರಬೇತಿಯು ಸಂಪೂರ್ಣವಾಗಿ ವಸತಿಯುತವಾಗಿದ್ದು, ತರಬೇತಿಯ ಅವಧಿಯಲ್ಲಿ ಉಚಿತವಾಗಿ ಊಟ ಮತ್ತು ವಸತಿ ನೀಡಲಾಗುವುದು ಹಾಗೂ ತರಬೇತಿ ಪೂರ್ಣಗೊಂಡ ನಂತರ ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಸಚಿವಾಲಯದಿಂದ ಪ್ರಮಾಣಪತ್ರವನ್ನು ವಿತರಿಸಲಾಗುವುದು. ಅರ್ಜಿ ಸಲ್ಲಿಸಲು ಡಿಸೆಂಬರ್ 07 ಕೊನೆಯ ದಿನ.

ಆಸಕ್ತರು ಅರ್ಜಿ ಸಲ್ಲಿಸಲು ಹಾಗೂ ಹೆಚ್ಚಿನ ಮಾಹಿತಿಗಾಗಿ ರುಡ್‌ಸೆಟ್ ಸಂಸ್ಥೆ, ಅರಿಶಿನಕುಂಟೆ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಮೊಬೈಲ್ ಸಂಖ್ಯೆ 9740982585, 9481506564, 9380162042, 9241482541 ಅನ್ನು ಸಂಪರ್ಕಿಸಬಹುದಾಗಿದೆ ಎಂದು ರುಡ್‌ಸೆಟ್ ಸಂಸ್ಥೆಯ ಬೆಂಗಳೂರು ಶಾಖೆಯ ನಿರ್ದೇಶಕರಾದ ಗಿರಿಧರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಘತ ಕಾಲದಲ್ಲಿ ಈ ದಿನ... 27 ನವೆಂಬರ್ 2026



ಸಂಗ್ರಹ;
ಕರಿನೆರವಂಡ ಡ್ಯಾನಿ ಕುಶಾಲಪ್ಪ

⭐ *ನ್ಯಾಷನಲ್ ಕೆಡೆಟ್ ಕಾರ್ಪ್ಸ್ (NCC) ಸ್ಥಾಪನೆ (1948).* ಯುವಜನರಲ್ಲಿ ಶಿಸ್ತು ಮತ್ತು ದೇಶಪ್ರೇಮ ಮೂಡಿಸುವ ಉದ್ದೇಶದಿಂದ ಭಾರತದಲ್ಲಿ ಎನ್‌ಸಿಸಿ (NCC) ಅಧಿಕೃತವಾಗಿ ಸ್ಥಾಪನೆಯಾಯಿತು

⭐ *ಕಾರ್ಟೊಸ್ಯಾಟ್-3 ಉಪಗ್ರಹ ಉಡಾವಣೆ (2019).* ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ISRO) ಭೂಮಿಯ ಅತ್ಯಂತ ಸ್ಪಷ್ಟ ಚಿತ್ರಗಳನ್ನು ಸೆರೆಹಿಡಿಯುವ ಸಾಮರ್ಥ್ಯವಿರುವ 'ಕಾರ್ಟೊಸ್ಯಾಟ್-3' ಉಪಗ್ರಹವನ್ನು ಯಶಸ್ವಿಯಾಗಿ ಉಡಾವಣೆ ಮಾಡಿತು.

⭐ *ಪ್ರಮುಖರ ಜನ್ಮದಿನಗಳು* . ಭಾರತದ ಮೊದಲ ಲೋಕಸಭಾ ಸ್ಪೀಕರ್ ಗಣೇಶ್ ವಾಸುದೇವ್ ಮಾವಳಂಕರ್ (1888) ಮತ್ತು ಖ್ಯಾತ ಹಿಂದಿ ಕವಿ ಹರಿವಂಶರಾಯ್ ಬಚ್ಚನ್ (1907) ಅವರು ಇದೇ ದಿನ ಜನಿಸಿದರು.

⭐ *ವಿ.ಪಿ. ಸಿಂಗ್ ನಿಧನ (2008)* . ಭಾರತದ ಮಾಜಿ ಪ್ರಧಾನಮಂತ್ರಿ ವಿಶ್ವನಾಥ್ ಪ್ರತಾಪ್ ಸಿಂಗ್ ನಿಧನರಾದರು.

⭐ *ನೊಬೆಲ್ ಪ್ರಶಸ್ತಿಗೆ ಅಡಿಪಾಯ (1895).* ಸ್ವೀಡಿಷ್ ವಿಜ್ಞಾನಿ ಆಲ್ಫ್ರೆಡ್ ನೊಬೆಲ್ ತಮ್ಮ ಆಸ್ತಿಯ ಬಹುಪಾಲನ್ನು ಭೌತಶಾಸ್ತ್ರ, ರಸಾಯನಶಾಸ್ತ್ರ, ವೈದ್ಯಕೀಯ, ಸಾಹಿತ್ಯ ಮತ್ತು ಶಾಂತಿ ಕ್ಷೇತ್ರಗಳ ಸಾಧಕರಿಗೆ 'ನೊಬೆಲ್ ಪ್ರಶಸ್ತಿ' ನೀಡಲು ಮೀಸಲಿಡುವ ಉಯಿಲಿಗೆ (Will) ಪ್ಯಾರಿಸ್‌ನಲ್ಲಿ ಸಹಿ ಹಾಕಿದರು.

⭐ *ಬೆಂಕಿಕಡ್ಡಿಯ ಆವಿಷ್ಕಾರ (1826).* ಇಂಗ್ಲೆಂಡ್‌ನ ರಸಾಯನಶಾಸ್ತ್ರಜ್ಞ ಜಾನ್ ವಾಕರ್ ಘರ್ಷಣೆಯಿಂದ ಹೊತ್ತಿಕೊಳ್ಳುವ ಬೆಂಕಿಕಡ್ಡಿಯನ್ನು (Friction Match) ಕಂಡುಹಿಡಿದರು.

⭐• *ಹೀರೋ ಕಪ್‌ನಲ್ಲಿ ಅನಿಲ್ ಕುಂಬ್ಳೆ ದಾಖಲೆ (1993).* ಕೋಲ್ಕತ್ತಾದ ಈಡನ್ ಗಾರ್ಡನ್ಸ್‌ನಲ್ಲಿ ನಡೆದ ಹೀರೋ ಕಪ್ ಫೈನಲ್‌ನಲ್ಲಿ ವೆಸ್ಟ್ ಇಂಡೀಸ್ ವಿರುದ್ಧ ಭಾರತ 102 ರನ್‌ಗಳ ಭರ್ಜರಿ ಜಯ ಸಾಧಿಸಿತು. ಈ ಪಂದ್ಯದಲ್ಲಿ ಅನಿಲ್ ಕುಂಬ್ಳೆ 12 ರನ್ ನೀಡಿ 6 ವಿಕೆಟ್ ಪಡೆಯುವ ಮೂಲಕ ಏಕದಿನ ಕ್ರಿಕೆಟ್‌ನಲ್ಲಿ ಭಾರತದ ಪರ ಅಂದಿನ ಅತ್ಯುತ್ತಮ ಬೌಲಿಂಗ್ ದಾಖಲೆ ಬರೆದರು.

⭐ *ಸಚಿನ್ ತೆಂಡೂಲ್ಕರ್ ವಿಶ್ವದಾಖಲೆ (1992).* ಜೋಹಾನ್ಸ್‌ಬರ್ಗ್‌ನಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧದ ಟೆಸ್ಟ್ ಪಂದ್ಯದಲ್ಲಿ ಸಚಿನ್ ತೆಂಡೂಲ್ಕರ್ (19 ವರ್ಷ, 22 ದಿನಗಳು) ಟೆಸ್ಟ್ ಕ್ರಿಕೆಟ್‌ನಲ್ಲಿ 1,000 ರನ್ ಪೂರೈಸಿದ ಅತ್ಯಂತ ಕಿರಿಯ ಆಟಗಾರ ಎಂಬ ದಾಖಲೆ ನಿರ್ಮಿಸಿದರು

⭐ *ಕ್ರಿಕೆಟ್ ಲೋಕದ ಕರಾಳ ದಿನ - ಫಿಲಿಪ್ ಹ್ಯೂಸ್ ನಿಧನ (2014).* ಶೆಫೀಲ್ಡ್ ಶೀಲ್ಡ್ ಪಂದ್ಯದ ವೇಳೆ ತಲೆಗೆ ಬೌನ್ಸರ್ ಚೆಂಡು ಬಡಿದು ಗಂಭೀರವಾಗಿ ಗಾಯಗೊಂಡಿದ್ದ ಆಸ್ಟ್ರೇಲಿಯಾದ ಯುವ ಕ್ರಿಕೆಟಿಗ ಫಿಲಿಪ್ ಹ್ಯೂಸ್ (25) ಚಿಕಿತ್ಸೆ ಫಲಕಾರಿಯಾಗದೆ ನಿಧನರಾದರು. ಇವರ ಗೌರವಾರ್ಥವಾಗಿ "63* ನಾಟ್ ಔಟ್" (63* Not Out Forever) ಇಂದಿಗೂ ಸ್ಮರಣೀಯವಾಗಿದೆ.

⭐ *ಬ್ರೂಸ್ ಲೀ ಜನ್ಮದಿನ (1940).* ವಿಶ್ವದ ಶ್ರೇಷ್ಠ ಮಾರ್ಷಲ್ ಆರ್ಟ್ಸ್ ಪಟು ಮತ್ತು ನಟ ಬ್ರೂಸ್ ಲೀ ಸ್ಯಾನ್ ಫ್ರಾನ್ಸಿಸ್ಕೋದಲ್ಲಿ ಜನಿಸಿದರು.

⭐ *ಭಾರತಕ್ಕೆ ಏಷ್ಯಾ ಕಪ್ ಟೆನಿಸ್ ಪ್ರಶಸ್ತಿ (1998).* ನವದೆಹಲಿಯಲ್ಲಿ ನಡೆದ ಫೈನಲ್‌ನಲ್ಲಿ ಉಜ್ಬೇಕಿಸ್ತಾನವನ್ನು 2-1 ಅಂತರದಿಂದ ಮಣಿಸಿ ಭಾರತ ಏಷ್ಯಾ ಕಪ್ ಟೆನಿಸ್ ಚಾಂಪಿಯನ್‌ಶಿಪ್ ಉಳಿಸಿಕೊಂಡಿತು.

⭐ *ಶಿಖರ್ ಧವನ್ ಶತಕ ಮತ್ತು ಸರಣಿ ಜಯ (2013).* ಕಾನ್ಪುರದಲ್ಲಿ ವೆಸ್ಟ್ ಇಂಡೀಸ್ ವಿರುದ್ಧ ನಡೆದ ಏಕದಿನ ಪಂದ್ಯದಲ್ಲಿ ಶಿಖರ್ ಧವನ್ ಶತಕದ (119) ನೆರವಿನಿಂದ ಭಾರತ ಸರಣಿಯನ್ನು ತನ್ನದಾಗಿಸಿಕೊಂಡಿತು.

ಉದ್ಯೋಗ ಮಾಹಿತಿ...

ಕರ್ನಾಟಕ ಅರಣ್ಯ ಇಲಾಖೆ (KFD - ಬೀಟ್ ಫಾರೆಸ್ಟರ್ / ಅರಣ್ಯ ರಕ್ಷಕ ನೇಮಕಾತಿ 2026)

- **ಹುದ್ದೆಗಳ ವಿವರ: ಬೀಟ್ ಫಾರೆಸ್ಟರ್ (Beat Forester / Forest Guard) ಹುದ್ದೆಗಳು.**
- **ಖಾಲಿ ಹುದ್ದೆಗಳು: ಒಟ್ಟು 450 ಹುದ್ದೆಗಳು (355 ಉಳಿಕೆ ಮೂಲ ವೃಂದ ಹಾಗೂ 95 ಕಲ್ಯಾಣ ಕರ್ನಾಟಕ ವಲಯ).**
- **ವಿದ್ಯಾರ್ಹತೆ: 2ನೇ ಪಿಯುಸಿ (PUC / 12ನೇ ತರಗತಿ) ಅಥವಾ ತತ್ಸಮಾನ ವಿದ್ಯಾರ್ಹತೆ.**
- **ಸಂಬಳ: ಸರ್ಕಾರದ ವೇತನ ಶ್ರೇಣಿಯಂತೆ ರೂ. 37,500 ರಿಂದ ರೂ. 76,100 ರವರೆಗೆ.**
- **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 22 ಡಿಸೆಂಬರ್ 2026 (ಶುಲ್ಕ ಪಾವತಿಗೆ 23 ಡಿಸೆಂಬರ್ 2026).**
- **ಅಧಿಕೃತ ವೆಬ್‌ಸೈಟ್:** https://cetonline.karnataka.gov.in/kea/

ರ್ನಾಟಕ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆ (KSFES - ಅಗ್ನಿಶಾಮಕ ನೇಮಕಾತಿ 2026)

- ಹುದ್ದೆಗಳ ವಿವರ: ಅಗ್ನಿಶಾಮಕ (Fire Fighter) ಹುದ್ದೆಗಳು.
- ಖಾಲಿ ಹುದ್ದೆಗಳು: ಒಟ್ಟು 460 ಹುದ್ದೆಗಳು.
- ವಿದ್ಯಾರ್ಹತೆ: ಎಸ್‌ಎಸ್‌ಎಲ್‌ಸಿ (SSLC / 10ನೇ ತರಗತಿ) ಅಥವಾ ತತ್ಸಮಾನ ವಿದ್ಯಾರ್ಹತೆ.
- ಸಂಬಳ: ಸರ್ಕಾರದ ವೇತನ ಶ್ರೇಣಿಯಂತೆ ರೂ. 37,500 ರಿಂದ ರೂ. 76,100 ರವರೆಗೆ.
- ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 22 ಡಿಸೆಂಬರ್ 2026 (ಶುಲ್ಕ ಪಾವತಿಗೆ 23 ಡಿಸೆಂಬರ್ 2026).
- ಅಧಿಕೃತ ವೆಬ್‌ಸೈಟ್: https://cetonline.karnataka.gov.in/kea/

ಕರ್ನಾಟಕ ಪರೀಕ್ಷಾ ಪ್ರಾಧಿಕಾರ (KEA - ಸಹಾಯಕ ಸರ್ಕಾರಿ ಅಭಿಯೋಜಕರ ನೇಮಕಾತಿ 2026) ಹುದ್ದೆಗಳ ವಿವರ: ಸಹಾಯಕ ಸರ್ಕಾರಿ ಅಭಿಯೋಜಕರು ಮತ್ತು ಸಹಾಯಕ ಸರ್ಕಾರಿ ವಕೀಲರು (Assistant Public Prosecutor-cum-Assistant Government Pleader - Group B).

- ಖಾಲಿ ಹುದ್ದೆಗಳು: ಒಟ್ಟು 320 ಹುದ್ದೆಗಳು (268 ಉಳಿಕೆ ಮೂಲ ವೃಂದ ಹಾಗೂ 52 ಕಲ್ಯಾಣ ಕರ್ನಾಟಕ ವಲಯ).
- ವಿದ್ಯಾರ್ಹತೆ: ಕಾನೂನು ಪದವಿ (LLB) ಮತ್ತು ಕನಿಷ್ಠ 3 ವರ್ಷಗಳ ವಕೀಲ ವೃತ್ತಿಯ ಅನುಭವ.
- ಸಂಬಳ: ಸರ್ಕಾರದ ವೇತನ ಶ್ರೇಣಿಯಂತೆ ರೂ. 69,250 ರಿಂದ ರೂ. 1,34,200 ರವರೆಗೆ.
- ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 15 ಡಿಸೆಂಬರ್ 2026 (ಶುಲ್ಕ ಪಾವತಿಗೆ 16 ಡಿಸೆಂಬರ್ 2026).
- ಅಧಿಕೃತ ವೆಬ್‌ಸೈಟ್: https://cetonline.karnataka.gov.in/kea/

ಕೊಡಗು ಜಿಲ್ಲೆಯ ವಿಶೇಷ ಹವಾಮಾನ ವರದಿ...

ನಾಳೆ ಅಲ್ಲಲ್ಲಿ ಸಣ್ಣ ಪ್ರಮಾಣದ ಮಳೆ ಸಂಭವ

- ಹಗಲಿನ ವಾತಾವರಣ: ನಾಳೆ (ದಿನಾಂಕ 28/11/2026) ಕೊಡಗು, ಕರ್ನಾಟಕದಲ್ಲಿ ಮೋಡ ಕವಿದ ವಾತಾವರಣವಿರಲಿದ್ದು, ಗರಿಷ್ಠ ತಾಪಮಾನವು 26°C – 27°C ಆಸುಪಾಸಿನಲ್ಲಿರಲಿದೆ. ವಾತಾವರಣದಲ್ಲಿ ತೇವಾಂಶವು ಶೇಕಡಾ 80% – 85% ರಷ್ಟಿರಲಿದ್ದು, ಯುವಿ (UV) ಸೂಚ್ಯಂಕವು 2 ರಿಂದ 3 (ಕಡಿಮೆ) ಇರಲಿದೆ.
- ಮಳೆಯ ಮುನ್ಸೂಚನೆ: ಹಗಲಿನಲ್ಲಿ ಮಳೆಯಾಗುವ ಸಂಭವವು ಶೇಕಡಾ 15% – 20% ರಷ್ಟಿದ್ದು, ಬೆಳಗಿನ ಜಾವ ಹಾಗೂ ಮುಂಜಾನೆ ವೇಳೆ ಅಲ್ಲಲ್ಲಿ ಮಂಜು ಅಥವಾ ತುಂತುರು ಮಳೆಯಾಗುವ ಸಾಧ್ಯತೆಯಿದೆ (ಶೇಕಡಾ 10% ರಿಂದ 20% ರಷ್ಟು).
- ರಾತ್ರಿಯ ವಾತಾವರಣ: ರಾತ್ರಿ ವೇಳೆಯೂ ಮೋಡ ಕವಿದ ವಾತಾವರಣ ಹಾಗೂ ತಂಪಾದ ಗಾಳಿ ಮುಂದುವರಿಯಲಿದ್ದು, ಕನಿಷ್ಠ ತಾಪಮಾನವು 19°C – 21°C ವರೆಗೆ ಇಳಿಯಲಿದೆ.
- ಗಾಳಿಯ ದಿಕ್ಕು ಮತ್ತು ವೇಗ: ಗಾಳಿಯು ಪೂರ್ವ ಅಥವಾ ಈಶಾನ್ಯ ದಿಕ್ಕಿನಿಂದ ಗಂಟೆಗೆ ಸುಮಾರು 6 ರಿಂದ 8 ಮೈಲಿ (ಸುಮಾರು 9–13 ಕಿ.ಮೀ) ವೇಗದಲ್ಲಿ ಬೀಸಲಿದೆ.